# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | 814 |
| ಸದಸ್ಯರ ಹೆಸರು | ಶ್ರೀ ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂ-ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸುವ ದಿನಾಂಕ | 23.07.2024 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ತೋಟಗಾರಿಕೆ ಇಲಾಖೆಯಲ್ಲಿ ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನ (SKUP) ಪ್ರಾರಂಭಗೊಂಡಿದ್ದು ಯಾವಾಗ: ಯಾವ ನಿಯಮದಡಿ ನೋಂದಣೆಯಾಗಿರುತ್ತದೆ ಹಾಗೂ ಇದರ ಮುಖ್ಯ ಉದ್ದೇಶಗಳೇನು: | ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನವನ್ನು ದಿನಾಂಕ:20-11-2006 ರಲ್ಲಿ ಮರು ನಾಮಕರಣ ಮಾಡಿ ಪ್ರಾರಂಭಿಸಲಾಗಿರುತ್ತದೆ.<br>ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನದ ಮುಖ್ಯ ಉದ್ದೇಶಗಳು ಇಂತಿವೆ:<br>1) ಪ್ರತಿಷ್ಠಾನದ ವ್ಯಾಪ್ತಿಯಲ್ಲಿ ಇರುವ ಉದ್ಯಾನವನವನ್ನು ನಿರ್ವಹಿಸುವುದು ಹಾಗೂ ಹೊಸದಾಗಿ ಉದ್ಯಾನನಗಳನ್ನು ಅಭಿವೃದ್ಧಿಪಡಿಸುವುದು.<br>2) ಸಂಪನ್ಮೂಲ ಕ್ರೂಢೀಕರಣ ಮತ್ತು ವೃತ್ತಿಪರ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾರ್ವಜನಿಕ-ಖಾಸಗಿ ಸಹಭಾಗಿತ್ವವನ್ನು ಹೊಂದಲು ಅವಕಾಶ ಮಾಡಿಕೊಡುವುದು.<br>3) ಬಾಹ್ಯ ಮೂಲದಿಂದ ಚಟುವಟಿಕೆಗಳನ್ನು ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳುವುದು, ಡೊನೇಷನ್ ಗಳು ದತ್ತಿ, ಪ್ರಾಯೋಜಕತೆ, ಕೊಡುಗೆಗಳು ಗೇಟ್ ಫೀ ಪಡೆಯುವ ಮೂಲಕ ಸ್ವಂತ ಸಂಪನ್ಮೂಲಗಳನ್ನು ಕ್ರೂಢೀಕರಿಸುವುದು.<br>4) ಪಾರ್ಕ್ ಗಳು ಮತ್ತು ಉದ್ಯಾನವನಗಳನ್ನು ಸೂಕ್ತ ರೀತಿಯಲ್ಲಿ ಅಭಿವೃದ್ಧಿಪಡಿಸುವುದು ಮತ್ತು ನಿರ್ವಹಿಸಲು ನೆರವಾಗುವ ಎಲ್ಲಾ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ಮಾಡಿಕೊಡುವುದು. ಉದಾಹರಣೆಗೆ ಪ್ರವಾಸಿ ಆಕರ್ಷಕ ಕೇಂದ್ರಗಳನ್ನಾಗಿ ಮಾಡುವುದು.<br>5) ಪಾರ್ಕ್ ಗಳು ಮತ್ತು ಉದ್ಯಾನನವಗಳ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಬಳಸಲು ಮೂಲಧನಕ್ಕೆ ಸಂಪನ್ಮೂಲಗಳನ್ನು ಜಮೆ ಮಾಡುವುದು ಮತ್ತು ಈ ನಿಧಿಯನ್ನು ಬಳಸಲು ಅವಕಾಶ ಕಲ್ಪಿಸುವುದು.<br>6) ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಪೂರಕವಾದಂತಹ ಪ್ರಸ್ತಾವನೆಯನ್ನು ಸಮಗ್ರವಾಗಿ |

| | | |
|---|---|---|
| | | ಪರಿಶೀಲಿಸಿ ಅಂಗೀಕರಿಸುವುದು.<br>7) ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನ ಕೇಂದ್ರ ಸಮಿತಿ ವ್ಯಾಪ್ತಿಯಲ್ಲಿ ಬರುವ ಲಾಲ್ ಬಾಗ್ ಸಸ್ಯಶಾಸ್ತ್ರೀಯ ತೋಟ, ಕಬ್ಬನ್ ಉದ್ಯಾನವನ, ಇಂದಿರಾಗಾಂಧಿ ಸಂಗೀತ ಕಾರಂಜಿ, ಕರ್ನಾಟಕ ಸಿರಿ ತೋಟಗಾರಿಕೆ ಉದ್ಯಾನವನ ಊಟಿ, ನಂದಿ ಗಿರಿಧಾಮ, ಕೃಷ್ಣರಾಜೇಂದ್ರ ಗಿರಿಧಾಮಗಳಲ್ಲಿ ಅವಶ್ಯವಿರುವ ವಿವಿಧ ಅಭಿವೃದ್ಧಿ ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳುವುದು ಹಾಗೂ ಹೊಸದಾಗಿ ರಾಜ್ಯದ ಇತರೆ ಭಾಗಗಳಲ್ಲಿ ಉದ್ಯಾನವನಗಳ ಅಭಿವೃದ್ಧಿಗೆ ಪ್ರಸ್ತಾವನೆಗಳ ಪರಿಶೀಲನೆ ಮತ್ತು ಅನುದಾನ ಬಿಡುಗಡೆ. |
| (ಆ) | ವಾರ್ಷಿಕ ಅನುದಾನ ಎಷ್ಟು ಹಾಗೂ SKUP ಅನುದಾನದ ಆಡಿಟ್ ಆಗಿದೆಯೇ: ಆಗಿದ್ದಲ್ಲಿ ವಿವರಗಳನ್ನು ನೀಡುವುದು: | ಸಸ್ಯತೋಟಗಳು/ ಉದ್ಯಾನವನಗಳು ಮತ್ತು ಗಿರಿಧಾಮಗಳಿಂದ ಸಾರ್ವಜನಿಕ ಪ್ರವೇಶ ಶುಲ್ಕ, ವಾಹನ ನಿಲುಗಡೆ ಶುಲ್ಕ, ಮ್ಯಾರಾಥಾನ್, ಚಿತ್ರೀಕರಣ, ಗಿಡಗಳ ಮಾರಾಟ ಮತ್ತು ಇತರೇ ಮೂಲಗಳಿಂದ ಸರಾಸರಿ ವಾರ್ಷಿಕ **ರೂ.9.50 ರಿಂದ 10.00 ಕೋಟಿಗಳ** ಹಣ ಸಂಗ್ರಹವಾಗುತ್ತದೆ. ಸರ್ಕಾರದಿಂದ ಪ್ರತಿಷ್ಠಾನಕ್ಕೆ ಪ್ರತ್ಯೇಕ ಅನುದಾನವು ದೊರೆಯುತ್ತಿಲ್ಲ.<br>ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನದ ಅಡಿಟ್ ಪ್ರತಿ ವರ್ಷ ಕೈಗೊಳ್ಳಲಾಗುತ್ತಿದೆ. 2022-23ನೇ ಸಾಲಿನವರೆಗೂ ಲೆಕ್ಕ ಪರಿಶೋದನೆಯನ್ನು ಕೈಗೊಳ್ಳಲಾಗಿದ್ದು. 2023-24 ನೇ ಸಾಲಿನ ಲೆಕ್ಕಪರಿಶೀಲನಾ ಕಾರ್ಯವು ಚಾಲ್ತಿಯಲ್ಲಿರುತ್ತದೆ. |
| ಇ | ತೋಟಗಾರಿಕೆ ಇಲಾಖೆಯಲ್ಲಿ ಹುದ್ದೆಗಳನ್ನು ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ , ಯಾವ ಯಾವ ಹುದ್ದೆಗಳನ್ನು ಉನ್ನತೀಕರಿಸಲಾಗಿದೆ; ವಿವರ ನೀಡುವುದು; | ಹೌದು, ಹುದ್ದೆಗಳ ಉನ್ನತೀಕರಣಕ್ಕಾಗಿ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಯಾವುದೇ ಹುದ್ದೆಗಳನ್ನು ಉನ್ನತೀಕರಿಸಿರುವುದಿಲ್ಲ. |
| ಈ | ಉನ್ನತೀಕರಿಸುವುದರಿಂದ ಇಲಾಖೆಗೆ ಹಾಗೂ ರೈತರಿಗೆ ಆಗುವ ಅನುಕೂಲಗಳೇನು; ಸದರಿ ಪ್ರಸ್ತಾವನೆಗೆ ಸರ್ಕಾರಕ್ಕೆ ತಗಲುವ ಆರ್ಥಿಕ ವೆಚ್ಚ ಎಷ್ಟು? | ಅನ್ವಯಿಸುವುದಿಲ್ಲ. |

HORTI 328 HGM 2024

S. S. [signature]

**(ಎಸ್.ಎಸ್.ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು